

# ಹೂವಿನಲ್ಲಿ ಅರಳಿದ ರಂಗೋಲಿ





ಹೂವು ಮತ್ತು ರಂಗೋಲಿಗೆ ಅನನ್ಯ ನಂಟು. ಇವೆರಡನ್ನು ನೆನೆದ ತಕ್ಷಣ ಹೊಳೆಯುವುದು ಬಣ್ಣ ಬಣ್ಣದ ಸುಂದರ ಲೋಕ. ಇವೆರಡೂ ಸೌಂದರ್ಯದ ಪ್ರತೀಕ.

ಹೂವಿಗೆ ಎಲ್ಲರನ್ನು ಆಕರ್ಷಿಸುವ ಮನಕ್ಕೆ ಮುದ ನೀಡುವ ಸೌಂದರ್ಯವಿದೆ. ಹಾಗೆಯೇ ರಂಗೋಲಿ ಕೂಡ ಎಲ್ಲರನ್ನು ಸೆಳೆಯುತ್ತದೆ. ಹೂವು ಪ್ರಕೃತಿಯ ಕೊಡುಗೆಯಾದರೆ ರಂಗೋಲಿ ನಮ್ಮ ಸುಂದರ ಕಲ್ಪನೆಯ ಚಿತ್ರಣ. ಇವೆರಡೂ ಸೇರಿದರೆ ಹೇಗಿರುತ್ತದೆ ಎನ್ನುವುದಕ್ಕೆ ಇಲ್ಲಿವೆ ಕೆಲವು ಹೂವಿನಿಂದ ಬಿಡಿಸಿದ ರಂಗೋಲಿಗಳು.

ರಂಗೋಲಿ ಒಂದು ಕಲೆ. ಇದನ್ನು ಎಲ್ಲರಿಂದಲೂ ಬಿಡಿಸಲು ಸಾಧ್ಯವಿಲ್ಲ. ರಂಗೋಲಿಯಲ್ಲಿ ಬಣ್ಣಗಳ ಆಯ್ಕೆ, ಬಣ್ಣಗಳನ್ನು ಹಾಕುವುದು, ಶೇಡ್ ಮಾಡುವುದು ತುಂಬಾ ಮುಖ್ಯ. ರಂಗೋಲಿಯಲ್ಲಿ ಹಲವು ಬಗೆಗಳಿವೆ. ಅವುಗಳಲ್ಲಿ ಪುಷ್ಪ ರಂಗೋಲಿಯೂ ಒಂದು. ಇದು ರಂಗೋಲಿಗೆ ಇತ್ತೀಚಿನ ಸೇರ್ಪಡೆ ಎಂದರೆ ತಪ್ಪಾಗಲಾರದೇನೋ. ಪುಷ್ಪ ರಂಗೋಲಿ ಹಾಕುವುದು ಉಳಿದ ರಂಗೋಲಿಗಳಿಗಿಂತ ಸುಲಭ.

ನೆಲದ ಮೇಲೆ ಮಾರ್ಕರ್‌ನಿಂದ ಬೇಕಾದ ಚಿತ್ರ ಬಿಡಿಸಿಕೊಂಡು ಅದಕ್ಕೆ ತಕ್ಕಂತೆ ಹೂವುಗಳನ್ನು, ಹೂವಿನ ಎಸಳುಗಳನ್ನು, ಮೊಗ್ಗು ಮತ್ತು ಅವಶ್ಯವಿದ್ದಲ್ಲಿ ಎಲೆಗಳನ್ನು ನೀಟಾಗಿ ಜೋಡಿಸುತ್ತಾ ಹೋಗಬೇಕು. ಆಗ ಸುಂದರ ಪುಷ್ಪ ರಂಗೋಲಿ ಮನ ಮೋಹಕವಾಗಿರುತ್ತದೆ. ಪುಡಿ ರಂಗೋಲಿಗಳನ್ನು ಬಿಡಿಸುವಾಗ ಎಳೆಗಳನ್ನು ಎಳೆಯುವುದು ತುಂಬಾ ಕಷ್ಟ. ಅದಕ್ಕೆ ತುಂಬಾ ದಿನಗಳ ಪ್ರಯತ್ನವಿರಬೇಕು. ಆದರೆ ಪುಷ್ಪ ರಂಗೋಲಿಯನ್ನು ಹಾಕಲು ಕಷ್ಟ ಪಡಬೇಕಾಗಿಲ್ಲ.

ಹೂವಿನ ರಂಗೋಲಿಯನ್ನು ಹಾಕುವಾಗ ಒಂದು ಅಂಶವನ್ನು ಗಮನದಲ್ಲಿಟ್ಟು ಕೊಳ್ಳಬೇಕು. ಹೂವಿನ ರಂಗೋಲಿಯ ಗಾತ್ರ ದೊಡ್ಡದಾಗಿದ್ದರೆ ಹೆಚ್ಚು ಆಕರ್ಷಕವಾಗಿರುತ್ತದೆ. ಅಲ್ಲದೇ ಬಹು ಬೇಗ ಬಾಡುವ ಹೂವುಗಳನ್ನು ಮತ್ತು ಎಲೆಗಳನ್ನು ಬಳಸಬಾರದು. ಸೇವಂತಿಗೆ, ಗೊಂಡೆ, ಸುಗಂಧರಾಜ, ಗುಲಾಬಿ ಮುಂತಾದ ಬೇಗನೆ ಬಾಡದ ಹೂವುಗಳನ್ನು ಬಳಸಿದರೆ ರಂಗೋಲಿಗಳು 3–4 ದಿನಗಳವರೆಗೆ ತನ್ನ ಅಂದವನ್ನು ಉಳಿಸಿಕೊಳ್ಳುತ್ತವೆ.

ಮದುವೆ, ಮುಂಜಿ, ರಿಸೆಪ್ಷನ್ ಮುಂತಾದ ಸಮಾರಂಭಗಳಲ್ಲಿ ಇಂತಹ ರಂಗೋಲಿಗಳನ್ನು ಹಾಕಿದರೆ ಎಲ್ಲರ ಮೆಚ್ಚುಗೆಗೂ ಪಾತ್ರರಾಗಬಹುದು.

■ ಚಿತ್ರ-ಬರಹ: **ಅಶ್ವಿನಿ ಹೆಗಡೆ, ಭೈರುಂಬೆ**